ಆ) ಈ ಯಂತ್ರಳಗಲ್ಲಿ ಕೆಲವು ನ್ಯೂನತೆಗಳು ಉದ್ಭವಿಸಿರುವುದರಿಂದ ಇದು ಕೆಲಸ ಮಾಡುತ್ತಿಲ್ಲ.

43. ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಳೇದಗುಡ್ಡ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಕಳೆದ ತಿಂಗಳು ದಿನಾಂಕ 17-2-83ರಂದು ವಿಜಾಪುರದಲ್ಲಿ ನಡೆದ ಬೆಂಕಿ ಅನಾಹುತದ ವಿವರ ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ನೊಂದ ಕುಟುಂಬದವರಿಗೆ ಸರಿಯಾದ ಪರಿಹಾರ ಕೊಡಲಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) :—

ಅ) 17-2-83ರಂದು ಬಿಜಾಪುರದಲ್ಲಿ ಮತೀಯ ಗಲಭೆ ಸಂಭವಿಸಿದ್ದು, ಆ ಸಮಯದಲ್ಲಿ ಮಾರು ಕಟ್ಟೆ ಪ್ರದೇಶ, ಮತ್ತು ಇತರ ಸ್ಥಳಗಳಲ್ಲಿ ಬೆಂಕಿ ಹಚ್ಚಿದುದರಿಂದ ಆಸ್ತಿಪಾಸ್ತಿಗೆ ನಷ್ಟ/ಹಾನಿ ಉಂಟಾಯಿತು.

ಆ) ಸದರಿ ಗಲಭೆಯಲ್ಲಿ ಹಾನಿಗೊಳಗಾದ 245 ವ್ಯಕ್ತಿಗಳಿಗೆ 5,27,200 ರೂ.ಗಳ ಅನುಗ್ರಹ ಪೂರ್ವಕ ಪರಿಹಾರ ಧನ ಮಂಜೂರು ಮಾಡಲಾಗಿದೆ. 10 ಲಕ್ಷ ರೂ.ಗಳ ಬಡ್ಡಿರಹಿತ ಸಾಲವನ್ನು ಸಹ ಮಂಜೂರು ಮಾಡಲಾಗಿದೆ.

43. ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಇತ್ತೀಚೆಗೆ ರಾಜ್ಯದಲ್ಲಿರುವ ಎಷ್ಟು ಪೊಲೀಸ್ ಅಧಿಕಾರಿಗಳನ್ನು ಡೈರೆಕ್ಟರ್ ಜನರಲ್ ಆಗಿ ನೇಮಿಸಲಾಯಿತು ;

ಆ) ಯಾವ ಆಧಾರದ ಮೇರೆಗೆ ಈ ಬಡ್ತಿ ನೀಡಲಾಯಿತು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು) :

ಅ) ಮೂರು ಜನ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಇತ್ತೀಚೆಗೆ ಡೈರೆಕ್ಟರ್ ಜನರಲ್ ಆಗಿ ನೇಮಿಸಲಾಯ್ತು.

ಆ) ಅವಶ್ಯಕತೆಯ ಆಧಾರದ ಮೇಲೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 44. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಳಿಗಗೆ ಉತ್ತರಿಸುವರೆ :—

ಅ) ಕನ್ನಡ ಓದಲು, ಬರೆಯಲು ಹಾಗೂ ಮಾತನಾಡಲು ಬಲ್ಲ ರಾಜ್ಯದ ಐ. ಎ. ಎಸ್. ಹಾಗೂ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

ಆ) ಕನ್ನಡ ಓದಲು, ಬರೆಯಲು ಹಾಗೂ ಮಾತನಾಡಲು ಬಾರದಂತಹ ಐ.ಎ.ಎಸ್. ಹಾಗೂ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ;

ಇ) ಅಂತಹ ಅಧಿಕಾರಿಗಳು ಕನ್ನಡವನ್ನು ಓದಲು, ಬರೆಯಲು ಹಾಗೂ ಮಾತನಾಡಲು ಕಲಿಸುವುದಕ್ಕೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು) :—

ಅ) ಆ) ವರಿಷ್ಠ ಕಾಲಮಾನ ವೇತನ ಶ್ರೇಣಿಗೆ ಬಡ್ತಿ ಕೊಡಬೇಕಾದರೆ ಎಲ್ಲ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲೇಬೇಕೆಂದು ಸರಕಾರವು ಕಡ್ಡಾಯ ಮಾಡಿದೆ. ಆದ್ದರಿಂದ ಈ ಅಧಿಕಾರಿಗಳೆಲ್ಲರೂ ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಕಲಿತೇ ಕಲಿಯುತ್ತಾರೆ.

ಇ) ಪ್ರಾರಂಭದ ತರಬೇತಿಯ ಅಂಗವಾಗಿ ಪ್ರತಿಯೊಬ್ಬ ಖಾಯಂಪೂರ್ವ ತರಬೇತುದಾರನಿಗೂ ಮೈಸೂರಿನಲ್ಲಿರುವ ಕೇಂದ್ರ ಭಾರತೀಯ ಭಾಷೆಗಳ ಸಂಸ್ಥೆಯಲ್ಲಿ ಕನ್ನಡ ಭಾಷೆಯಲ್ಲಿ ತರಬೇತಿಯನ್ನು ಕೊಡಲಾಗುತ್ತದೆ. ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಲು ಪ್ರತಿಯೊಬ್ಬ ತರಬೇತುದಾರನು ಒಬ್ಬ ಶಿಕ್ಷಕನ ನೆರವನ್ನು ಪಡೆಯಬಹುದು. ವರಿಷ್ಠ ಕಾಲಮಾನ ವೇತನ ಶ್ರೇಣಿಗೆ ಬಡ್ತಿ ಹೊಂದಲು ಪ್ರತಿಯೊಬ್ಬ ಐಎಸ್ ಮತ್ತು ಐಪಿಎಸ್ ಅಧಿಕಾರಿಯೂ ಕರ್ನಾಟಕ ಲೋಕ ಸೇವಾ ಆಯೋಗದವರು ವಿಧಿಸಿದ ಕನ್ನಡ ಭಾಷೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲೇಬೇಕು.

ಉಪಾಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಮನವಿಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾದಗಿರಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಇಬ್ಬರು ಹರಿಜನರು ಸತ್ತುಹೋಗಿದ್ದಾರೆ. 25 ಜನ ಗಾಯಗೊಂಡಿದ್ದಾರೆ. 150 ಗುಡಿಸಲುಗಳು ಸುಟ್ಟುಹೋಗಿವೆ. ಸುಮಾರು 15 ಲಕ್ಷ ರೂಪಾಯಿ ನಷ್ಟವುಂಟಾಗಿದೆ.

ಉಪಾಧ್ಯಕ್ಷರು.—ತಾವು ನನ್ನ ಛೇಂಬರ್‌ನಲ್ಲಿ ಹೇಳಿದ್ದೀರಿ. ನಾನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಹಳ್ಳಿಗೆ ಇನ್ನೂ ಜಿಲ್ಲಾಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಹೋಗಿಲ್ಲ. 25 ಲಕ್ಷ ರೂಪಾಯಿಯ ಹರಿಜನರ ಆಸ್ತಿ ಹಾಳಾಗಿ ಹೋಗಿದೆ. ಸುಮಾರು

150 ಗುಡಿಸಲುಗಳು ಸುಟ್ಟು ಹೋಗಿವೆ. 15 ಜನರು ಗಾಯಗೊಂಡಿದ್ದಾರೆ. ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ನಾನು ತಮ್ಮನ್ನು ಮೊಖ್ತಿ ಭೇಟಿಯಾಗಿದ್ದೇನೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದುವರೆಗೆ ಅವರಿಗೆ ಏನೂ ರಿಲೀಫ್ ಮಟ್ಟಿಲ್ಲ.

ಸ್ವಾಮಿ ನಾನು ನೋಟೀಸ್ ಕೊಟ್ಟು 15 ದಿವಸಗಳಾಗಿದೆ. ಆದರೆ ನನ್ನ ನೋಟೀಸ್‌ಗೆ ಇದುವರೆಗೂ ತಾವು ಅವಕಾಶ ಮಾಡಿಕೊಟ್ಟಿಲ್ಲ.

ಉಪಾಧ್ಯಕ್ಷರು.—ನಾನು ತಮ್ಮ ನೋಟೀಸ್‌ನ್ನು ಪರಿಶೀಲನೆ ಮಾಡುತ್ತೇನೆ. ತಾವು ನನ್ನ ಕೊಠಡಿಗೆ ಕೂಡ ಬಂದು ಈ ವಿಷಯವನ್ನು ತಿಳಿಸಿದ್ದೀರಿ. ಆದ್ದರಿಂದ ನಾಳೆ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಸಂಬಂಧಪಟ್ಟ ಮಂತ್ರಿಗಳೂ ಕೂಡ ಇಲ್ಲ.

ಶ್ರೀ ಎಸ್. ಚಿಕ್ಕೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 24-3-83 ರಂದು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಯಾವುದೇ ಒಬ್ಬ ಮಂತ್ರಿಗಳು ಅಧಿಕೃತವಾಗಿ ಪ್ರವಾಸ ಹೋಗತಕ್ಕಂಥ ಕಾಲದಲ್ಲಿ ಸಂಬಂಧಪಟ್ಟ ಶಾಸಕರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ತಿಳಿಸಿ ಹೋಗುತ್ತೇನೆಂದು ಸ್ಪಷ್ಟವಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದಾಗ್ಯೂ ಕೂಡ ದಿನಾಂಕ 26-3-83ರಂದು 10 ಗಂಟೆ 45 ನಿಮಿಷಗಳಿಗೆ ನನ್ನ ಕ್ಷೇತ್ರದಲ್ಲಿ ಸನ್ಮಾನ್ಯ ಆಡಳಿತ ಮಂತ್ರಿಗಳು ಹೋಗಿ ಒಂದು ಸಮಾರಂಭದಲ್ಲಿ ಭಾಗವಹಿಸಿ ಬಂದಿದ್ದಾರೆ. ಆ ಸಮಾರಂಭದಲ್ಲಿ ಮಾನ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸೇವಾ ಸದಕಾರಿ ಸಂಸ್ಥೆಯ ಮುಖಾಂತರ ಸಾಲವಿತರಣೆಯನ್ನು ಮಾಡಿದ್ದಾರೆ. ಆದರೆ ನಾನು ಇದೇ ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಕೇಳುತ್ತಾ ಕುಳಿತುಕೊಂಡಿದ್ದೆ. ನನಗೂ ಕೂಡ ಒಂದು ಮಾತು ತಿಳಿಸಲಿಲ್ಲ. ನನಗೆ ಪ್ರವಾಸದ ಕಾರ್ಯಕ್ರಮ ಪಟ್ಟಿ ಕೂಡ ಕಳುಹಿಸಿಕೊಟ್ಟಿಲ್ಲ. ಇದರಿಂದ ಮಾನ್ಯ ಮುಖ್ಯಮಂತ್ರಿಗಳ ಹಿಡಿತದಲ್ಲಿ ಮಾನ್ಯ ಮಂತ್ರಿಗಳು ಇಲ್ಲವೆಂದು ಗೊತ್ತಾಗುತ್ತದೆ. ಮಾನ್ಯ ಅರಣ್ಯ ಮಂತ್ರಿಗಳು ಉದ್ದೇಶಪೂರ್ವಕವಾಗಿ ಈ ರೀತಿ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರಿಂದ ಮಾನ್ಯ ಮಂತ್ರಿಗಳು ನಾಚಿಕೆ ಪಡಬೇಕಾಗಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಅರಣ್ಯಮಂತ್ರಿಗಳು ಸಭೆಯಲ್ಲಿದ್ದಾರೆ. ಅವರು ಇದರ ಬಗ್ಗೆ ಸ್ಪಷ್ಟೀಕರಣ ಕೊಡುತ್ತಾರೆ.

ಶ್ರೀ ಜೀ ವಿಜಯ(ಮಾನ್ಯ ಅರಣ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀ ಮಾನ್ ಚಿಕ್ಕೇಗೌಡರು ಏನು ಒಂದು ಗಂಭೀರತರವಾದಂಥ ಆಪಾದನೆಯನ್ನು ಮಾಡಿದ್ದಾರೆ ಅದಕ್ಕೆ ನಾನು ಉತ್ತರವಾಗಿ ಹೇಳುವುದೇನೆಂದರೆ ಆ ಸಮಾರಂಭಕ್ಕೆ ನಾನು ಅಧಿಕೃತವಾಗಿ ಹೋಗಿರಲಿಲ್ಲ. ನಾನು ಹೋಗುವಾಗ ಖಾಸಗಿ ಬಸ್ಸಿನಲ್ಲಿ ಹೋಗಿ ಬಂದಿದ್ದೇನೆ. ಆ ಒಂದು ಸಮಾರಂಭವನ್ನು ನಮ್ಮ ಪಕ್ಷದ ಪತಿಯಿಂದ ಏರ್ಪಾಡು ಮಾಡಿದ್ದರು. ಆ ಸಮಾರಂಭಕ್ಕೆ ಅಧಿಕಾರಿಗಳು ಬಂದರೆ ನಾನು ಏನು ಮಾತನಾಡುವುದಕ್ಕೆ ಆಗುತ್ತದೆ ? ಮಾನ್ಯ ಸದಸ್ಯರು ಹೇಳಿದ ಹಾಗೆ 10-45ಕ್ಕೆ ನಾನು ಹೋಗಿರಲಿಲ್ಲ. ನಾಲ್ಕು ಗಂಟೆಗೆ ಹೋಗಿ ಸಮಾರಂಭವನ್ನು ಮುಗಿಸಿಕೊಂಡು ಬಂದಿದ್ದೇನೆ. ನಾನು ಖಾಸಗಿಯಾಗಿ ಹೋಗಿದ್ದೇನೆ.

ಶ್ರೀ ಎಸ್. ಚಿಕ್ಕೇಗೌಡ.—ಸ್ವಾಮಿ ಬೇಕಾದರೆ ನಾನು ಈ ಕಾರ್ಯಕ್ರಮದ ಪಟ್ಟಿಯನ್ನು ಕಳುಹಿಸಿ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಸುಳ್ಳು ಹೇಳುತ್ತಿದ್ದಾರೆ. ಈ ಒಂದು ಸಮಾರಂಭದಲ್ಲಿ ಸರ್ಕಾರಿ ಅಧಿಕಾರಿಗಳು ಕೂಡ ಭಾಗವಹಿಸಿದ್ದಾರೆ.

ಶ್ರೀ ಜೀ ವಿಜಯ.—ಮಾನ್ಯ ಅಧ್ಯಕ್ಷರೇ.ಸರ್ಕಾರಿ ಅಧಿಕಾರಿಗಳು ಭಾಗವಹಿಸಿದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ ?

ಉಪಾಧ್ಯಕ್ಷರು.—ತಾವು ಆ ಕಾರ್ಯಕ್ರಮದ ಪಟ್ಟಿಯನ್ನು ಕಳುಹಿಸಿಕೊಡಿ.

ಶ್ರೀ ಎಸ್. ಚಿಕ್ಕೇಗೌಡ.—ಮಾನ್ಯ ಮಂತ್ರಿಗಳು ಸುಳ್ಳು ವಿವರಣೆಯನ್ನು ಕೊಡುತ್ತಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್‌ರವರೇ ನೀವು ಹೇಳಿ ನಿಮ್ಮ ವಿಷಯ ಏನು ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ನಿಯಮ 324ರ ಪ್ರಕಾರ ಒಂದು ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದೇನೆ. ಇವತ್ತು ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ನನ್ನ ಕ್ಷೇತ್ರದಲ್ಲಿಯೂ ಕೂಡ ನೀರು ಇಲ್ಲ. ಸಾವಿರಾರು ಜನರು ನೀರಿನ ಕೊಡಗಳನ್ನು ಹಿಡಿದುಕೊಂಡು ಸುತ್ತಾಡುತ್ತಿದ್ದಾರೆ. ಆದರೆ ಅವರೆಲ್ಲಾ ಇವತ್ತು ಕೊಡಗಳನ್ನು ಹಿಡಿದುಕೊಂಡು ಪೆರೆವಣಿಗೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಈಗಾಗಲೇ ಸವಿಸ್ತಾರವಾಗಿ ಚರ್ಚೆಯಾಗಿದೆ. ಮಾನ್ಯ ಮಂತ್ರಿಗಳು ಕೂಡ ಇದಕ್ಕೆ ಉತ್ತರ ಹೇಳಿದ್ದಾರೆ. ಈಗ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಆ

ಕಾಶ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಉತ್ತರ ದಲ್ಲಿಹೇಳಿದ್ದಾರೆ ಇನ್ನು 20 ಎಂ. ಜಿ. ಸಿ. ನೀರು ಬರಬೇಕೆಂದು. ಸುಮಾರು ಎರಡು ಮೂರು ದಿವಸಗಳಿಂದ ಕುಡಿಯುವ ನೀರು ಇಲ್ಲದೆ ಜನರು ಬಹಳ ತೊಂದರೆ ಪಡುತ್ತಿದ್ದಾರೆ.

ಉಪಾಧ್ಯಕ್ಷರು.—ಈ ವಿಷಯದ ಬಗ್ಗೆ ಈಗಾಗಲೇ ಸದನದಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಈ ವಿಷಯ ಈ ಸದನದಲ್ಲಿ ಚರ್ಚೆಯಾಗಿದೆ. ಅಲ್ಲಿರ ತಕ್ಕಂಥ ಪರಿಸ್ಥಿತಿಯನ್ನು ಬಗೆಹರಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ನಾನು ಕೂಡ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ದಿನಾಂಕ 3-3-83ರಿಂದ ಭೂನ್ಯಾಯ ಮಂಡಲಿಗಳ ಖಾಸಗಿ ಸದಸ್ಯರನ್ನು ರದ್ದು ಮಾಡಿರುವ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ಭೂನ್ಯಾಯ ಮಂಡಲಿಗಳನ್ನು ರದ್ದು ಮಾಡಿರುವುದರಿಂದ ಅಲ್ಲಿನ ಸಿಬ್ಬಂದಿ ವರ್ಗಕ್ಕೆ ಮತ್ತು ತಹಶೀಲ್ದಾರ್‌ರವರಿಗೆ ಕೆಲಸವಿಲ್ಲದಂತಾಗಿದೆ. ಸುಮಾರು ಜನ ರೈತರಿಗೆ ಇದರಿಂದ ತೊಂದರೆಯಾಗುತ್ತಿದೆ. ಮತ್ತು ಹೈಕೋರ್ಟಿನಿಂದ ಕೂಡಾ ಬೇಕಾದಷ್ಟು ಕೇಸ್‌ಗಳು ಪುನಃ ರಿಮ್ಯಾಂಡ್ ಆಗುತ್ತಿವೆ. ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡುವ ಬಗ್ಗೆ ನಾನು ಒಂದು ನೋಟಿಸ್ ಕಳುಹಿಸಿಕೊಟ್ಟಿದ್ದೇನೆ. ಆದ್ದರಿಂದ ತಾವು ಅವಕಾಶ ಮಾಡಿಕೊಡಬೇಕೆಂದು ನಾನುವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಫಾರಂ ನಂಬರು 2(ಎ)ಪ್ರಕಾರ ಹಾಕಿರತಕ್ಕಂಥ ಕೇಸ್‌ಗಳು ಕೂಡ ಸಾಕಾದಷ್ಟು ಪೆಂಡಿಂಗ್ ಇವೆ. ಆದ್ದರಿಂದ ಆದಷ್ಟು ಬೇಗ ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡ ಬೇಕೆಂದು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ.

ಉಪಾಧ್ಯಕ್ಷರು.—ನಾನು ಪರಿಶೀಲನೆ ಮಾಡಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ ನಾನು ಸುಮಾರು 15 ದಿವಸಗಳ ಹಿಂದೆ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿ ನೌಕರರು ನಡೆಸುತ್ತಿರುವ ಮುಷ್ಕರಕ್ಕೆ ಸಂಬಂಧಪಟ್ಟ ಹಾಗೆ ಒಂದು ನೋಟೀಸ್ ಕೊಟ್ಟಿದ್ದೆ. ಆದರೆ ಇದುವರೆಗೂ ಸರ್ಕಾರ ಅದಕ್ಕೆ ಉತ್ತರ ಕೊಟ್ಟಿಲ್ಲ. ಸರ್ಕಾರದವರು ಒಂದು ಇಲ್ಲೀಗಲ್ ಆರ್ಡರನ್ನು ಹೊರಡಿಸಿದ್ದಾರೆ. ಅಲ್ಲಿ ಫ್ಯಾಕ್ಟರಿ ಲಾಕೌಟ್ ಆಗಿದೆ. ಆದ್ದರಿಂದ ತಾವು ಈ ವಿಷಯ ವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ನಾನು ಪರಿಶೀಲನೆ ಮಾಡಿ ತಮಗೂ ಅವಕಾಶ ಮಾಡಿಕೊಡುತ್ತೇನೆ. ದಿನಾಂಕ 31-3-83ರಂದು ಈ ಬರಗಾಲ ಮತ್ತು ನೀರಿನ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಒಂದು ಕಾಲಮಿತಿ ಹಾಕಿಕೊಂಡಿದ್ದೇವೆ. ಆ ದಿವಸ ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ ದಾವಣಗೆರೆಯ ರೆಗ್ಯೂಲೇಟೆಡ್ ಮಾರ್ಕೇಟಿಗೆ ಬರುವ ರಸ್ತೆಯಲ್ಲಿರುವಂಥ ರೈಲ್ವೆ ಗೇಟ್‌ನ್ನು ಮುಚ್ಚಿದ್ದಾರೆ. ಈ ಗೇಟ್ ಮುಚ್ಚಿರುವುದರಿಂದ ರೈತರು ರೆಗ್ಯೂಲೇಟೆಡ್ ಮಾರ್ಕೆಟ್‌ಗೆ ಬರುವುದಕ್ಕೆ ಬಹಳ ತೊಂದರೆಯಾಗುತ್ತದೆ. ಈ ರೈಲ್ವೆ ಗೇಟ್‌ನ್ನು ತೆಗೆಸಬೇಕೆಂದು ನಾನು 1979ನೇ ಇಸವಿಯಿಂದ ಕೂಡ ಹೇಳುತ್ತಾ ಬಂದಿದ್ದೇನೆ. ಆದರೂ ಕೂಡ ಆ ಕೆಲಸವನ್ನು ಅವರು ಮಾಡಲಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆ ರೈಲ್ವೆ ಗೇಟ್‌ನ್ನು ತೆಗೆಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ತಾವು ಒಂದು ವೇಳೆ ಆ ಗೇಟ್‌ನ್ನು ಓಪನ್ ಮಾಡದಿದ್ದರೆ ಅಲ್ಲಿನ ರೈತರು ಮತ್ತು ವ್ಯಾಪಾರಸ್ಥರು ಚಳುವಳಿಯನ್ನು ಮಾಡುವುದೆಂದು ನಿರ್ಧಾರ ಮಾಡಿದ್ದಾರೆ. ಅವರು ಚಳುವಳಿಯನ್ನು ಮಾಡುತ್ತೇವೆಂದು ಸಂಬಂಧಪಟ್ಟ ಮಂತ್ರಿಗಳಿಗೂ ಕೂಡ ವಿಷಯವನ್ನು ತಿಳಿಸಿದ್ದಾರೆ. ಆದ್ದರಿಂದ ಆ ರೈಲ್ವೆ ಗೇಟ್‌ನ್ನು ತಾವು ಓಪನ್ ಮಾಡಿಸಿದರೆ ಒಳ್ಳೆಯದೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ತಾವು ಸನ್ನ ಕೊಠಡಿಗೆ ಬಂದು ನೋಡಿ. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

1982-83ರ ಆರ್ಥಿಕ ವರ್ಷದಲ್ಲಿ ಪೂರಕ ಬೇಡಿಕೆಗಳು(ಎರಡನೆಯ ಹಾಗೂ ಅಂತಿಮ ಕಂತು)

Sri A. Lakshmi Sagar —(Minister for Law and Parlimentary Affairs) Sir On behalf of the Chief Minister, on the..... :—

ಶ್ರೀ ಜಿ. ನಾರಾಯಣಕುಮಾರ್.—ಕನ್ನಡದಲ್ಲಿ ಓದಿ, ಕನ್ನಡ ಆಡಳಿತ ಭಾಷೆಯಾಗಿದೆ. ನಮಗೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು.—ಕನ್ನಡದಲ್ಲೂ ಹೇಳಬಹುದು, ಇಂಗ್ಲೀಷ್‌ನಲ್ಲೂ ಹೇಳಬಹುದು.

ಶ್ರೀ ಜಿ. ನಾರಾಯಣಕುಮಾರ್.—ಇಲ್ಲದಿದ್ದರೆ ಕನ್ನಡದಲ್ಲಿ ತರ್ಜುಮೆ ಮಾಡಲಿಕ್ಕೆ ಯಾರನ್ನಾದರೂ ನೇಮಿಸಬೇಕು.

ಉಪಾಧ್ಯಕ್ಷರು.—ಸಭೆಯ ಕಾರ್ಯಕಲಾಪಗಳಿಗೆ ದಯವಿಟ್ಟು ಅಡ್ಡಿ ಮಾಡಬೇಡಿ.